# ಸಂಜನಾಗೆ ನಟನೆಯಲ್ಲಿಯೇ ಆನಂದ!

ಕನ್ನಡದ ಹೊಸ ನಟಿಯರಲ್ಲಿ ಎದ್ದು ಕಾಣುವ ಹೆಸರು ಸಂಜನಾ ಆನಂದ್. ಅವರು ನಟಿಸಿರುವ ಮೊದಲ ಸಿನಿಮಾ ಬಿಡುಗಡೆಯಾಗಿದೆಯಷ್ಟೆ. ಆದರೆ ಅದರ ನಂತರ ನಾಲ್ಕು ಸಿನಿಮಾಗಳಲ್ಲಿ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ.

■ ಪದ್ಮನಾಭ ಭಟ್

ಸಾಮಾನ್ಯವಾಗಿ ಹೊಸತಾಗಿ ಚಿತ್ರರಂಗಕ್ಕೆ ಬರುವ ನಟಿಯರಿಗೆ ಮೊದಲ ಸಿನಿಮಾದಲ್ಲಿ ನಾಯಕಿಯಾಗಿ ಅವಕಾಶ ಸಿಕ್ಕುವುದೇ ಕಷ್ಟ. ಹಾಗೊಮ್ಮೆ ಸಿಕ್ಕಿದರೂ ಅದು ಎರಡನೇ ಸಿನಿಮಾಗೂ ಮುಂದುವರಿಯುವುದು ಅದೃಷ್ಟ.

ಸಂಜನಾ ಆನಂದ್ ವಿಷಯದಲ್ಲಿ ಹಾಗಾಗಿಲ್ಲ. ಅವರು ನಟಿಸಿದ ಮೊದಲ ಸಿನಿಮಾ 'ಕೆಮೆಸ್ಟ್ರಿ ಆಫ್ ಕರಿಯಪ್ಪ'. ಯಾವ ಸ್ಟಾರ್ ನಟರೂ ಇಲ್ಲದ ಒಂದು ಹಾಸ್ಯಚಿತ್ರ. ಆ ಸಿನಿಮಾ ಚಿತ್ರಮಂದಿರಗಳಲ್ಲಿ ಒಂದಿಷ್ಟು ದಿನ ನಿಂತು ಹೊರಟುಹೋಯಿತು. ಆದರೆ ಸಂಜನಾರನ್ನು ಚಿತ್ರರಂಗ ಹಾಗೆ ಹೊರಟು ಹೋಗಲು ಬಿಡಲಿಲ್ಲ. ಮೊದಲ ಸಿನಿಮಾ ಮಾಡಿ ತುಸು ಅನುಮಾನದ ಕಣ್ಣುಗಳಿಂದಲೇ ಚಿತ್ರರಂಗವನ್ನು ನೋಡುತ್ತಿದ್ದ ಈ ಐಟಿ ಹುಡುಗಿಗೆ ಒಂದರ ಹಿಂದೆ ಒಂದರಂತೆ ನಾಲ್ಕು ಸಿನಿಮಾಗಳಲ್ಲಿ ನಟಿಸುವ ಅವಕಾಶ ನೀಡಿ ಚಂದನವನ ಬರಸೆಳೆದುಕೊಂಡಿತು. ಪರಿಣಾಮವಾಗಿ ಐಟಿ ವೃತ್ತಿಗೆ ರಾಜೀನಾಮೆ ನೀಡಿದ ಈ ಹುಡುಗಿ ಪೂರ್ತಿಯಾಗಿ ನಟನೆಯಲ್ಲಿ ಬ್ಯುಸಿಯಾಗಿದ್ದಾರೆ.

'2019ರಲ್ಲಿ ತೆರೆಕಂಡ ಕೆಮೆಸ್ಟ್ರಿ ಆಫ್ ಕರಿಯಪ್ಪ ಸಿನಿಮಾವೇ ನನಗೆ ಬ್ರೇಕ್ ಕೊಟ್ಟಿದ್ದು. ಅದಕ್ಕೂ ಮೊದಲು ನಾನು ನಟಿಯಾಗುವ ಕನಸೂ ಕಂಡವಳಲ್ಲ; ನಟಿಯಾಗುತ್ತೇನೆ ಎಂದು ಕನಸಲ್ಲಿಯೂ ಎಣಿಸಿದವಳಲ್ಲ' ಎನ್ನುತ್ತಾರೆ ಸಂಜನಾ.

'ಮೊದಲ ಸಿನಿಮಾ ಒಪ್ಪಿಕೊಂಡಾಗಲೂ ಇದೇ ಕ್ಷೇತ್ರದಲ್ಲಿ ಮುಂದುವರಿಯಬೇಕು ಎಂದು ನಿರ್ಧರಿಸಿರಲಿಲ್ಲ. ಐಟಿ ವೃತ್ತಿಯ ಜೊತೆಗೆ ಇದನ್ನೂ ಒಂದು ಪ್ಯಾಷನ್ ಆಗಿ ಇಟ್ಟುಕೊಂಡರಾಯ್ತು ಎಂದುಕೊಂಡಿದ್ದೆ. ಆದರೆ ನಂತರ ಇನ್ನಷ್ಟು ಅವಕಾಶಗಳು ಬಂದವು. ಅದು ದಿನಕ್ಕೆ ಹನ್ನೆರಡು ತಾಸು ಸಮಯ ಬೇಡುವ ವೃತ್ತಿ. ಚಿತ್ರೀಕರಣದಲ್ಲಿ ಪಾಲ್ಗೊಳ್ಳುವುದು ಹೇಗೆ? ಅಲ್ಲದೇ ನನಗೂ ನಟನೆಯಲ್ಲಿಯೇ ಖುಷಿಯಾಗಿರಲು ಸಾಧ್ಯ ಅನಿಸಿತು. ಹಾಗಾಗಿ ಕೆಲಸಕ್ಕೆ ರಾಜೀನಾಮೆ ನೀಡಿ ಪೂರ್ಣಪ್ರಮಾಣದಲ್ಲಿ ನಟನೆಯಲ್ಲಿ ತೊಡಗಿಸಿಕೊಂಡೆ' ಎನ್ನುತ್ತಾರೆ ಅವರು.

'ವಿಂಡೊ ಸೀಟ್'. 'ಶೋಕಿವಾಲ', 'ಕ್ಷತ್ರಿಯ', 'ಸಲಗ' – ಇವು ಸಂಜನಾ ನಟಿಸಿರುವ ಸಿನಿಮಾಗಳು. ಈ ನಾಲ್ಕೂ ಚಿತ್ರಗಳಲ್ಲಿ ನಾಲ್ಕು ಬಗೆಯ ಪಾತ್ರಗಳಲ್ಲಿ ನಟಿಸಿರುವ ಖುಷಿ ಅವರದ್ದು.

''ಶೋಕಿವಾಲ ಸಿನಿಮಾದಲ್ಲಿ ಹಳ್ಳಿ ಹುಡುಗಿಯ ಪಾತ್ರ. ಮಂಡ್ಯ ಕಡೆಯ ಹುಡುಗಿಯಾಗಿ ಕಾಣಿಸಿಕೊಂಡಿದ್ದೀನಿ. 'ಕ್ಷತ್ರಿಯ' ಸಿನಿಮಾದಲ್ಲಿ ಕಾಲೇಜ್ ಹುಡುಗಿ. 'ಸಲಗ'ದಲ್ಲಿ ಬೋಲ್ಡ್ ಹುಡಗಿ ಕ್ಯಾರೆಕ್ಟರ್'' ಎಂದು ಅವರು ಖುಷಿಯಿಂದ ಹೇಳಿಕೊಳ್ಳುತ್ತಾರೆ.

'...ಕರಿಯಪ್ಪ' ಸಂಜನಾಗೆ ಚಿತ್ರರಂಗಕ್ಕೆ ಪ್ರವೇಶ ಕೊಟ್ಟಿದ್ದರೆ, ದುನಿಯಾ ವಿಜಯ್ ನಿರ್ದೇಶನದ 'ಸಲಗ' ಸಿನಿಮಾ ಅವರಿಗೆ ನಟನೆಯ ಕಲಿಕೆಯ ಪಾಠಶಾಲೆಯಾಗಿ ಒದಗಿಬಂದಿದೆ. 'ಸಲಗ' ಅವರು ನಟಿಸಿದ ಮೊದಲ ಸ್ಟಾರ್ ಸಿನಿಮಾ.

'ಸಲಗ ಸಿನಿಮಾ ಒಪ್ಪಿಕೊಂಡಾಗ ಮೊದಲು ಹೆದರಿಕೆಯಿತ್ತು. ಯಾಕೆಂದರೆ, ವಿಜಯ್, ಧನಂಜಯ್, ಅಚ್ಯುತ್‌ಕುಮಾರ್ ಹೀಗೆ ಹಲವು ಅನುಭವಿ ನಟರು ಅದರಲ್ಲಿದ್ದರು. ಅವರ ಜೊತೆ ನಿರೀಕ್ಷೆಗೆ ತಕ್ಕ ಹಾಗೆ ನಟಿಸುತ್ತೇನೆಯೇ ಎಂಬ ಅಂಜಿಕೆಯಲ್ಲಿಯೇ ಚಿತ್ರೀಕರಣಕ್ಕೆ ತೊಡಗಿದೆ. ಆದರೆ ಅವರೆಲ್ಲರೂ ನನ್ನ ಭಯವನ್ನು ತುಂಬ ಬೇಗ ದೂರ ಮಾಡಿಬಿಟ್ಟರು. ಈ ಸಿನಿಮಾದಲ್ಲಿ ನಟಿಸುತ್ತ ನಾನು ನಟನೆಯ ಹಲವು ಪಾಠಗಳನ್ನು ಕಲಿತಿದ್ದೇನೆ' ಎಂದು ಹೇಳುತ್ತಾರೆ ಸಂಜನಾ.

'ವಿಜಯ್ ತುಂಬ ಚೆನ್ನಾಗಿ ನಿರ್ದೇಶನ ಮಾಡಿದ್ದಾರೆ. ಜನರು ಹೇಗೆ ಸ್ವೀಕರಿಸುತ್ತಾರೆ ಎಂಬ ಕಾತರದಲ್ಲಿದ್ದೇನೆ' ಎನ್ನುವ ಅವರಿಗೆ ಮುಂದೆಯೂ ಜನರು ಖಂಡಿತ ಚಿತ್ರಮಂದಿರಗಳಿಗೆ ಬಂದೇ ಸಿನಿಮಾ ನೋಡುತ್ತಾರೆ ಎಂಬ ವಿಶ್ವಾಸವಿದೆ.

ಸಂಜನಾ ನಿರ್ದೇಶಕರ ನಟಿ. ಅವರ ಕಲ್ಪನೆಯ ಪಾತ್ರಕ್ಕೆ ಜೀವ ತುಂಬುವುದೇ ನಟನೆಯ ಅಂತಿಮ ಉದ್ದೇಶ ಎಂದು ನಂಬಿದವರು. ಹಾಗೆಂದು ಖಾಲಿ ತಲೆಯಲ್ಲಿ ಸೆಟ್‌ಗೆ ಹೋಗಿ ನಿರ್ದೇಶಕರು ಹೇಳಿದಷ್ಟನ್ನು ಮಾಡಿ ಮನೆಗೆ ಬರುವವರಲ್ಲ. ತಮ್ಮ ಪಾತ್ರದ ನೋಟ, ವರ್ತನೆ, ಮನಸ್ಥಿತಿ ಎಲ್ಲದರ ಕುರಿತೂ ಸಾಕಷ್ಟು ಯೋಚನೆ ಮಾಡಿ ಸಿದ್ಧತೆ ಮಾಡಿಕೊಂಡೇ ಸೆಟ್‌ಗೆ ಹೋಗುತ್ತಾರೆ. ತಮ್ಮಿಂದ ಉಳಿದವರಿಗೆ ತೊಂದರೆ ಆಗಬಾರದು ಎಂಬ ವಿವೇಕ ಅವರಲ್ಲಿದೆ.

ಸದ್ಯಕ್ಕಂತೂ ಕೈತುಂಬ ಅವಕಾಶಗಳನ್ನು ಇಟ್ಟುಕೊಂಡಿರುವ ಸಂಜನಾ, ತಮ್ಮ ಮುಂದಿನ ಸಿನಿಮಾಗಳಿಗೆ ಜನರ ಸ್ಪಂದನ ಹೇಗಿರುತ್ತದೆ ಎಂಬುದನ್ನು ನೋಡುವ ನಿರೀಕ್ಷೆಯಲ್ಲಿದ್ದಾರೆ. ಆ ಸ್ಪಂದನವೇ ಅವರ ವೃತ್ತಿಬದುಕಿನ ದಾರಿಯ ಹರವು ತಿರುವುಗಳನ್ನು ನಿರ್ಧರಿಸುತ್ತದೆ. ■



ಚಿತ್ರ: ಅಭಿಷೇಕ್ ಎಸ್.ಎನ್